# ಬೆಟ್ಟದ ಗೊರಿಲ್ಲಾಗಳ ಕ್ವಿಟಾ ಇಜಿನಾ



ಪ್ರವೀಣ ಕುಲಕರ್ಣಿ

ಆಫ್ರಿಕಾದ ರುವಾಂಡಾ ದೇಶದ ಕಿನಿಗಿ ಬೆಟ್ಟ–ಗುಡ್ಡಗಳಲ್ಲಿ ಈಗ ಏನೋ ಸಂಭ್ರಮ. 'ಕ್ವಿಟಾ ಇಜಿನಾ' ಎಂಬ ಹೆಸರಿನಿಂದ ಅಲ್ಲಿನ ಜನರೀಗ ಉತ್ಸವ ಆಚರಣೆಯಲ್ಲಿ ನಿರತ. 'ಕ್ವಿಟಾ ಇಜಿನಾ' ಎಂದರೆ ವಿನಾಶದ ಅಂಚಿನಲ್ಲಿರುವ ಬೆಟ್ಟದ ಗೊರಿಲ್ಲಾಗಳ ಕುಟುಂಬದಲ್ಲಿ ಬಂದಿರುವ ಹೊಸ ಸದಸ್ಯರಿಗೆ ಹೆಸರಿಡುವ ವಾರ್ಷಿಕ ಕಾರ್ಯಕ್ರಮ. ಹೀಗಾಗಿ ಬೆಟ್ಟದ ಗೊರಿಲ್ಲಾಗಳಿಗೂ ಇದು ಹರ್ಷದ ಸಮಯ ಎನ್ನಿ. ಬೆಟ್ಟದ ಗೊರಿಲ್ಲಾಗಳ ಉಳಿವಿಗಾಗಿ ಪರಿಸರ ಸಂರಕ್ಷಣಾ ಚಳವಳಿಗಾರರು, ಸೆಲೆಬ್ರಿಟಿಗಳು, ದೇಣಿಗೆದಾರರು, ರಾಜತಾಂತ್ರಿಕರು ಒಟ್ಟಾಗಿ ನಡೆಸುವ ಕಾರ್ಯಕ್ರಮ 'ಕ್ವಿಟಾ ಇಜಿನಾ'. ಗೊರಿಲ್ಲಾಗಳೇ ಇಲ್ಲಿ ಕೇಂದ್ರಬಿಂದು.

ಬೇಬಿ ಗೊರಿಲ್ಲಾಗಳಿಗೆ ಹೆಸರಿಡಲು ಈ ಸಲ ತಾರಾಸಮೂಹವೇ ಕಿನಿಗಿಯ ವಾಲ್ಕೆನೋಸ್ ರಾಷ್ಟ್ರೀಯ ಉದ್ಯಾನದಲ್ಲಿ ಸರದಿ ನಿಂತಿದೆ. ಬ್ರಿಟನ್ ನಟ ಇದ್ರಿಸ್ ಎಲ್ಬಾ, ಅವರ ಪತ್ನಿ ಸಬ್ರಿನಾ ಧೋವೇರ್ ಎಲ್ಬಾ, ನೈಜೀರಿಯನ್–ಫ್ರೆಂಚ್ ಗಾಯಕಿ ಬುಕೋಲಾ ಎಲಿಮಿಡಿ, ಅಮೆರಿಕದ ನಟ ಕೆವಿನ್ ಹಾರ್ಟ್ ಎಲ್ಲರೂ ಬಂದಿದ್ದಾರೆ. 2022ರ ಸೆಪ್ಟೆಂಬರ್‌ನಿಂದ 2023ರ ಸೆಪ್ಟೆಂಬರ್‌ವರೆಗೆ ಜನಿಸಿದ ಗೊರಿಲ್ಲಾ ಮರಿಗಳಿಗೆ ಈ ಸೆಲೆಬ್ರಿಟಿಗಳು ನಾಮಕರಣ ಮಾಡಲಿದ್ದಾರೆ. ಈ ನಾಮಕರಣ ಉತ್ಸವವನ್ನು 2005ರಲ್ಲಿ ಶುರುಮಾಡಲಾಗಿದೆ. ಅಲ್ಲಿಂದ ಇದುವರೆಗೆ 374 ಮರಿಗಳಿಗೆ ಹೆಸರು ನೀಡಲಾಗಿದೆ.

ಬೇಬಿ ಗೊರಿಲ್ಲಾಗಳಿಗೆ ನಾಮಕರಣ ಮಾಡುವ 'ಕ್ವಿಟಾ ಇಜಿನಾ' ಉತ್ಸವ ಆರಂಭಿಸಿದ ಮೇಲೆ ಕಿನಿಗಿ ಬೆಟ್ಟದಲ್ಲಿ ಗೊರಿಲ್ಲಾಗಳ ಸಂಖ್ಯೆ ನಿಧಾನವಾಗಿ ಹೆಚ್ಚುತ್ತಿದೆ. ಇನ್ನೇನು ಬೆಟ್ಟದ ಗೊರಿಲ್ಲಾಗಳು ರುವಾಂಡಾದಿಂದಲೇ ಕಣ್ಮರೆಯಾದವು ಎಂಬ ಆತಂಕ ಮೂಡಿದ್ದಾಗ, ಅವುಗಳ ಸಂಖ್ಯೆಯಲ್ಲಿ ಹೆಚ್ಚಳ ಕಾಣುತ್ತಿರುವುದು ಆಶಾದಾಯಕ ಬೆಳವಣಿಗೆಯಾಗಿದೆ. ರಾಷ್ಟ್ರೀಯ ಗುರಿಯನ್ನೂ ಮೀರಿ ಗೊರಿಲ್ಲಾಗಳ ಸಂತತಿ ಅಭಿವೃದ್ಧಿಯಾಗುತ್ತಿದೆ. ನಾಮಕರಣ ಉತ್ಸವದ ಮೂಲಕ ರುವಾಂಡಾದ ವನ್ಯಜೀವಿ ರಕ್ಷಣೆ ಕಾರ್ಯಗಳನ್ನು ಜಗತ್ತಿನ ಮುಂದೆ ತೆರೆದಿಡುವುದು ಮತ್ತು ಸಂರಕ್ಷಣಾ ಕಾರ್ಯಗಳಿಗಾಗಿ ದೇಣಿಗೆ ಸಂಗ್ರಹಿಸುವುದು ಸರ್ಕಾರದ ಉದ್ದೇಶ ಎಂದು ಅಲ್ಲಿನ ಅಧಿಕಾರಿಗಳು ಹೇಳುತ್ತಾರೆ.

ಮಂಗನಿಂದ ಮಾನವ ಎನ್ನುವ ಮಾತಿದೆಯಲ್ಲ? ವಿಕಾಸವಾದ ಹೇಳುವುದು ಕೂಡ ಅದನ್ನೇ. ಗೊರಿಲ್ಲಾ ಕೂಡ ಮಂಗನಿಂದಲೇ ವಿಕಾಸಹೊಂದಿದ್ದು ಎಂದು. ಸುಮಾರು 90 ಲಕ್ಷ ವರ್ಷಗಳ ಹಿಂದೆ ಅರೇಬಿಯಾ ಮತ್ತು ಆಫ್ರಿಕಾ ಪ್ರದೇಶಗಳಲ್ಲಿ ಮಂಗನಿಂದ ಗೊರಿಲ್ಲಾ ವಿಕಾಸವಾಯಿತು ಎಂದು ಜೀವವಿಕಾಸದ ಚರಿತ್ರೆ ಹೇಳುತ್ತದೆ. ಗೊರಿಲ್ಲಾಗಳು ವಿಕಾಸವಾಗಿ 20 ಲಕ್ಷ ವರ್ಷಗಳ ನಂತರ ಆಫ್ರಿಕಾದ ಪೂರ್ವ ಮತ್ತು ಪಶ್ಚಿಮ ಪ್ರಭೇದಗಳಲ್ಲಿ ಅವುಗಳು ಪ್ರತ್ಯೇಕಗೊಂಡವು. ಆಫ್ರಿಕಾದ ಪೂರ್ವಭಾಗದ ಗೊರಿಲ್ಲಾಗಳೇ ಈಗ ಬೆಟ್ಟದ ಗೊರಿಲ್ಲಾಗಳೆಂದು ಹೆಸರಾಗಿವೆ. ಹೆಸರೇ ಸೂಚಿಸುವಂತೆ ಇವುಗಳ ಆವಾಸಸ್ಥಾನ ಬೆಟ್ಟಗಳೇ ಆಗಿವೆ.

ಬೆಟ್ಟದ ಗೊರಿಲ್ಲಾಗಳು ಆಫ್ರಿಕಾದ ಮೂರೇ ಮೂರು ದೇಶಗಳಲ್ಲಿ ಕಾಣಸಿಗುತ್ತವೆ. ರುವಾಂಡಾ ಹೊರತುಪಡಿಸಿದರೆ ಉಗಾಂಡಾ ಮತ್ತು ಕಾಂಗೊದಲ್ಲಿ ಅವುಗಳ ಆವಾಸಸ್ಥಾನಗಳಿವೆ. ಈ ಮೂರೂ ದೇಶಗಳಿಂದ ಆವೃತವಾದ ಬೆಟ್ಟಗಳಿಂದಲೇ ಕೂಡಿದ ಅರಣ್ಯಪ್ರದೇಶ ಗೊರಿಲ್ಲಾಗಳಿಗೆ ಹೇಳಿ ಮಾಡಿಸಿದಂತಿದೆ. ತಂಪಾದ ಮತ್ತು ಮೋಡಗಳಿಂದ ಕೂಡಿದ ವಾತಾವರಣ, ಹಸುರು ಮುಕ್ಕಳಿಸುವ ಕಾಡು ಅವುಗಳ ಬದುಕಿನ ಅಗತ್ಯವನ್ನು ಪೂರೈಸುತ್ತವೆ. ಹೀಗಾಗಿ ಅವುಗಳು ಈ ಭಾಗದಲ್ಲೇ ನೆಲೆ ಕಂಡುಕೊಂಡಿವೆ. ಬೆಟ್ಟದ ತಳಭಾಗದಲ್ಲಿ ನೆಲೆ ಕಂಡುಕೊಂಡಿರುವ ಇತರ ಗೊರಿಲ್ಲಾಗಳಂತೆ ಇವುಗಳನ್ನು ಸೆರೆ ಹಿಡಿದು ಸಲಹಲು ಆಗದು. ಅಂತಹ ಎಲ್ಲ ಪ್ರಯತ್ನಗಳಲ್ಲೂ ಗೊರಿಲ್ಲಾಗಳು ಸಾವನ್ನಪ್ಪಿವೆ. ಹೀಗಾಗಿ ಅವುಗಳ ಆವಾಸಸ್ಥಾನದಲ್ಲೇ ಅವುಗಳ ರಕ್ಷಣೆ ಮಾಡಬೇಕಿದೆ. ಒಂದು ಕಾಲದಲ್ಲಿ ಬೆಟ್ಟದ ಗೊರಿಲ್ಲಾಗಳು ಭಾರೀ ಸಂಖ್ಯೆಯಲ್ಲಿದ್ದವು. ಆದರೆ, ದಿನದಿಂದ ದಿನಕ್ಕೆ ಅವುಗಳ ಸಂಖ್ಯೆ ಕ್ಷೀಣಿಸುತ್ತಾ ಸಾಗಿದ್ದರಿಂದ 2018ರ ಗಣತಿ ಪ್ರಕಾರ, ಸದ್ಯ 1,004 ಬೆಟ್ಟದ ಗೊರಿಲ್ಲಾಗಳು ಮಾತ್ರ ಉಳಿದುಕೊಂಡಿವೆ. ಇದೇ ಕಾರಣದಿಂದ ಬೆಟ್ಟದ ಗೊರಿಲ್ಲಾಗಳನ್ನು ವಿನಾಶದ ಅಂಚಿನ ಪ್ರಭೇದಗಳ ಪಟ್ಟಿಯಲ್ಲಿ ಸೇರಿಸಲಾಗಿದೆ.

ಬೇರೆ ಗೊರಿಲ್ಲಾಗಳಿಗೆ ಹೋಲಿಸಿದರೆ ಬೆಟ್ಟದ ಗೊರಿಲ್ಲಾಗಳಿಗೆ ಮೈಮೇಲಿನ ಕೂದಲು ಇನ್ನೂ ದಟ್ಟವಾಗಿರುತ್ತದೆ. ಇದೇ ಕಾರಣದಿಂದ ಎಂತಹ ಚಳಿಯನ್ನೂ ತಡೆದುಕೊಳ್ಳುವ ಸಾಮರ್ಥ್ಯ ಅವುಗಳಿಗಿದೆ. ಬೆನ್ನಮೇಲೆ ಬಿಳಿ ಕೂದಲು ಅವುಗಳಿಗೆ ಇರುವುದರಿಂದ 'ಬೆಳ್ಳಿ ಬೆನ್ನಿನ ಗೊರಿಲ್ಲಾ' ಎಂದೂ ಅವುಗಳು ಹೆಸರುವಾಸಿ. ಅವುಗಳ ತೂಕವೂ ಇತರ ಗೊರಿಲ್ಲಾಗಳಿಗಿಂತ ಹೆಚ್ಚು. ಇವುಗಳ ಕೈಗಳು, ಕಾಲುಗಳಿಗಿಂತ ಉದ್ದ. ಅವುಗಳು ನಡೆದುಕೊಂಡೂ ಹೋಗಬಹುದು. ಆದರೆ, ಬಾಗಿಕೊಂಡು ಕೈಕಾಲುಗಳ ಸಹಾಯದಿಂದ ನಡೆಯಲು (ನಕಲ್ ವಾಕಿಂಗ್) ಅವುಗಳು ಇಷ್ಟಪಡುತ್ತವೆ. ಹಗಲು ಹೊತ್ತಿನಲ್ಲಿ ಮಾತ್ರ ಬೆಟ್ಟದ ಗೊರಿಲ್ಲಾಗಳು ಕ್ರಿಯಾಶೀಲವಾಗಿರುತ್ತವೆ. ಆಗ ಆಹಾರ ಅರಸುವುದರಲ್ಲೇ ಹೆಚ್ಚಿನ ಸಮಯ ವಿನಿಯೋಗಿಸುತ್ತವೆ. ಮುಂಜಾನೆ ಮತ್ತು ಸಂಜೆ ತಿನ್ನುವುದರಲ್ಲೇ ಕಾಲ ಕಳೆದರೆ, ಮಧ್ಯಾಹ್ನ ಸಣ್ಣ ನಿದ್ದೆ ತೆಗೆಯುತ್ತವೆ. ಇಂತಹ ವಿಶಿಷ್ಟ ಸಂತತಿ ಅಳಿವಿನಂಚಿನಲ್ಲಿ ಇರುವುದರಿಂದ ಅವುಗಳ ಉಳಿವಿಗಾಗಿ ಜಗತ್ತು ಕೈಜೋಡಿಸಿದೆ. ಇದೇ ಕಾರಣದಿಂದಲೇ ರುವಾಂಡಾದಲ್ಲಿ ಈಗ ಉತ್ಸವ ನಡೆಯುತ್ತಿದೆ. ■

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65